ಸ್ವಲ್ಪ ಖಾಸಗಿಯಾಗಿ ಮಾತನಾಡುವಂತಿದ್ದ ಪ್ರತ್ಯೇಕ ಮೂಲೆಯ ಸ್ಥಳದಲ್ಲಿದ್ದ ಟೇಬಲಿನ ಸುತ್ತಲು ಹಾಕಲಾಗಿದ್ದ ಕುರ್ಚಿಗಳಲ್ಲಿ ಹೋಗಿ ಮೂವರೂ ಕುಳಿತುಕೊಂಡರು.

'ನನ್ನನ್ನು ಇಲ್ಲಿ ಯಾತಕ್ಕೆ ಕರ್ಕೊಂಡು ಬಂದಿದ್ದೀರಾ..? ಏನು ವಿಷ್ಯ..?' ಸೂರ್ಯ ಪ್ರಶ್ನಾರ್ಥಕವಾಗಿ ನೋಡಿದಾಗ ಅಪೂರ್ವ ಅರ್ಥಗರ್ಭಿತವಾಗಿ ಪುಟ್ಟಸ್ವಾಮಯ್ಯನವರ ಮುಖ ದಿಟ್ಟಿಸಿದಳು. ಅವಳು ಹಿಂದಿನ ದಿನದ ಭೇಟಿಯಲ್ಲಿ ಸೂರ್ಯನ ಮನಸ್ಥಿತಿಯ ಬಗ್ಗೆ ಎಲ್ಲವನ್ನೂ ಹೇಳಿದ್ದಳು.

'ಸೂರ್ಯ ನನ್ಗೆ ನಿನ್ನ ಹುಟ್ಟಿದ ಹಬ್ಬ ಹೇಗೆ ಗೊತ್ತು...ನೀನು ಹೇಳು?' ಸೂರ್ಯನ ಬಳಿ ಆ ಪ್ರಶ್ನೆಗೆ ಉತ್ತರವಿರಲಿಲ್ಲ.

'ನೀನು ರಿಮ್ಯಾಂಡ್ ಹೋಮ್ನಿಂದ ಜೈಲಿಗೆ ಬಂದಾಗ, ನಾನು ಜೈಲರ್ ಆಗಿದ್ದೆ.. ನಿನ್ನ ಹುಟ್ಟಿದ ದಿನ, ನೀನು ಹೇಳದೇ ಹೋದರೂ ನನಗೆ ಹೇಗೆ ಗೊತ್ತು.. ಮತ್ತು... ಆ ಖೈದಿಗಳ ನಡುವೆ ನಿನ್ನ ಹುಟ್ಟುಹಬ್ಬವನ್ನು ಮಾತ್ರ ವಿಶೇಷವಾಗಿ ಯಾಕೆ ಆಚರಿಸ್ತಾ ಇದ್ವೀಂತ ಆಲೋಚನೆ ಮಾಡಿದ್ಯಾ..?'

ಸೂರ್ಯ ಆ ದಿಕ್ಕಿನಲ್ಲಿ ಎಂದೂ ಯೋಚಿಸಲು ಹೋಗಿರಲಿಲ್ಲ. 'ನಾನೇನೂ ರೆಕಾರ್ಡ್ಸ್ ನೋಡಲು ಹೋಗಲಿಲ್ಲ.. ಆದ್ರೆ, ನಿಮ್ಮ ಮನೆಯವರೊಬ್ಬರು ನಿನ್ನ ಪ್ರತಿ ಹುಟ್ಟಿದ ಹಬ್ಬಕ್ಕೆ ಸಿಹಿ ತಂದು ಕೊಡ್ತಿದ್ರು, ಗೊತ್ತಾ ನಿನಗೆ?'

ಸೂರ್ಯ ನಂಬಲಾರದವನಂತೆ ನೋಡಿದ, 'ನನ್ನ ಮನೆಯವರು..! ನಾನು ಜೈಲಲ್ಲಿರುವಾಗ ನನ್ನ ಕಾಣಲು ಬಂದೇ ಇಲ್ಲ, ನಾನು ನಂಬುವುದಿಲ್ಲ..' ಎಂದ ದೃಢವಾಗಿ.

'ಇಲ್ಲ ಸೂರ್ಯ.. ಅದು ನಿನ್ನ ತಪ್ಪು ಕಲ್ಪನೆ... ನಿನ್ನ ಕಾಣಲು ಪ್ರತೀ ತಿಂಗಳಿಗೊಮ್ಮೆ.. ಜೈಲಲ್ಲಿದ್ದ ಈ ಆರೂ ವರ್ಷಗಳು ಬಂದಿದ್ದಾರೆ. ಆದರೆ ನಿನ್ನನ್ನು ಮಾತನಾಡಿಸದೇ ನಿನ್ನನ್ನು ದೂರದಿಂದ ಕಂಡು ಕಣ್ಣೀರು ಹಾಕಿ ಹೋಗ್ತಿದ್ರಷ್ಟೇ.'

ಸೂರ್ಯ ದಂಗು ಬಡಿದವನಂತೆ ಕುಳಿತಿದ್ದ. ಅವನ ಮನಸ್ಸು ಅವರ ಮಾತುಗಳನ್ನು ಒಪ್ಪಲು ಸಿದ್ಧವಿರಲಿಲ್ಲ. 'ಸುಳ್ಳು ಇದನ್ನ ನಾನು ನಂಬಲ್ಲ.. ನನ್ನನ್ನು ಕಾಣಲು ಬಂದರೂ ಯಾಕೆ ನನ್ನನ್ನು ಮಾತನಾಡಿಸದೇ ಹೋಗಬೇಕು...?'

'ಯಾಕೆಂದರೆ ನಿನಗೆ ನಿನ್ನ ತಪ್ಪಿನ ಅರಿವಾಗಲಿ, ನಿನ್ನಲ್ಲಿ ಪಾಪಪ್ರಜ್ಞೆ ಮೂಡಲಿ...ನಿನ್ನ ಅಂತರಂಗ ಶುದ್ಧವಾಗಲಿ ಎಂಬ ಕಾರಣಕ್ಕೆ.. ಹೆತ್ತವರು ನಿನ್ನನ್ನು ಯಾಕೆ ಮಾತನಾಡಿಸಲು ಬರುತ್ತಿಲ್ಲ ಎಂಬ ಪ್ರಶ್ನೆ ನಿನ್ನೊಳಗೇ ಮೂಡಲಿ... ನೀನೊಬ್ಬ ಹೊಸ ಮನುಷ್ಯನಾಗಿ ಹೊರ ಬರಲಿ, ಎಂಬ ಕಾರಣಕ್ಕೆ..'

'ಮತ್ತೆ ಅಮ್ಮ.. ಇದನ್ನು ನನಗೆ ತಿಳಿಸಲೇ ಇಲ್ಲ...'ಎಂದು ರಾಗವೆಳೆದ ಸೂರ್ಯ.

'ನಿನ್ನ ಅಮ್ಮನಿಗೆ ಈ ಸತ್ಯ ಗೊತ್ತೇ ಇಲ್ಲ... ಅವ್ರು ಯಾವತ್ತೂ ನಿನ್ನ ಕಾಣಲು, ಆ ಆರು ವರ್ಷಗಳು ಬಂದೇ ಇಲ್ಲ...' ಎಂದರು ಪುಟ್ಟಸ್ವಾಮಯ್ಯನವರು.

ಸೂರ್ಯನ ಹುಬ್ಬುಗಳು ವಿಸ್ಮಯ ಭಾವದಿಂದ ಒಂದುಗೂಡಿದವು, 'ಮತ್ತೆ? ನನ್ನನ್ನು ನೋಡಲು.. ತಿಂಗ್ಳಿಗೊಮ್ಮೆ ಬರ್ತಾ ಇದ್ದವರು ಯಾರು?'

ಪುಟ್ಟಸ್ವಾಮಯ್ಯನವರು ನಿಧಾನವಾಗಿ, 'ನಿಮ್ಮಪ್ಪ.. ಅಂದ್ರೆ.. ನನ್ನ ಖಾಸಾ ದೋಸ್ತು.. ಪ್ರಭಾಕರರಾಯರು. ಪ್ರತಿ ತಿಂಗ್ಳು ತಪ್ಪದೇ ನಿನ್ನ ಕಾಣಲು ಬರ್ತಿದ್ರು.. ದೂರದಲ್ಲಿ ನಿಂತು ನೀನು ಕೆಲಸ ಮಾಡೋದನ್ನು ನೋಡ್ತಿದ್ದು ಕಣ್ಣೀರಿಡ್ತಿದ್ರು... ನಾನೆಷ್ಟೋ ಸಲ ನಿನ್ನ ಮಾತನಾಡಿಸುವ ಸಲುವಾಗಿ ಒತ್ತಾಯಿಸುತ್ತಿದ್ದೆ... ಆತ ಒಪ್ಪುತ್ತಿರಲಿಲ್ಲ... ನನ್ನ ಕಂಡ್ರೆ ಅಪ್ಪಿಗೆ ಆಗಲ್ವೋ.. ಸ್ವಾಮಿ....! ಎನ್ನುತ್ತಿದ್ದರು... ನಿನ್ನ ಹುಟ್ಟಿದ ಹಬ್ಬದ ದಿನ ಸಿಹಿ ಹೊತ್ತು ತರ್ತಿದ್ರು... ನಿನ್ನ ಬಗ್ಗೆ ನನಗೆ ಅಕ್ಕರೆಯ ಭಾವ ಇದ್ದದ್ದು.. ನೀನು ನನ್ನ ಸ್ನೇಹಿತನ ಮಗ ಅನ್ನುವ ಕಾರಣಕ್ಕೆ ಮಾತ್ರ..'

ಪುಟ್ಟಸ್ವಾಮಯ್ಯನವರು ಹೇಳಿದ ಸತ್ಯ ಅರಗಿಸಿಕೊಳ್ಳಲು ಸೂರ್ಯನಿಗೆ ನಿಮಿಷಗಳೇ ಹಿಡಿದವು. ಅಪೂರ್ವಳಿಗೆ ಹಿಂದಿನ ದಿನ ಪುಟ್ಟಸ್ವಾಮಿಯವರಿಂದ ಈ ಸತ್ಯ ಅರಿವಾದಾಗ ಅವಳೂ ದಂಗಾಗಿ ಕುಳಿತಿದ್ದಳು. ಕಡೆಗೂ ಅವಳ ನಂಬಿಕೆ, ವಿಶ್ವಾಸ ಜಯಿಸಿದ್ದಕ್ಕೆ ಅವಳಿಗೆ ಸಮಾಧಾನವಾಗಿತ್ತು. ಈ ಸತ್ಯ ಸೂರ್ಯನ ಮುಂದೆ ತಿಳಿಯದಂತೆ ಪ್ರಭಾಕರರಾಯರು, ಸ್ವಾಮಿಯವರಿಂದ ಪಡೆದಿದ್ದ ಮಾತನ್ನು ಮೀರಿ ಅವರಿಬ್ಬರ ಬಾಂಧವ್ಯ ಈಗ ಅಗ್ನಿಪರೀಕ್ಷೆಗೆ ಒಳಗಾದ ಸಂದರ್ಭದಲ್ಲಿ ಅದನ್ನು ಅರಹುವಂತೆ ಸ್ವಾಮಿಯವರನ್ನು ಅಪೂರ್ವ ಒಪ್ಪಿಸಿದ್ದಳು.

'ಸುಳ್ಳು... ಸುಳ್ಳು...' ಸೂರ್ಯ ತೊದಲಿದ.

'ನನಗೊತ್ತು...... ನಿನಗೆ ನಂಬಿಕೆ ಬರಲ್ಲ ಅಂತ... ಅದಿಕ್ಕೆ ಜೈಲಿನ ವಿಸಿಟರ್ ರೆಕಾರ್ಡ್‌ನ ಪುಸ್ತಕದ ಜೆರಾಕ್ಸ್ ತಂದಿದ್ದೀನೆ ನೋಡು... ನಿನ್ನ ಅಪ್ಪ ನಿನ್ನನ್ನು ಕಾಣಲು ಬಂದ ದಿನಾಂಕ, ಸಹಿ ಎಲ್ಲಾ ಇದೆ... ವರ್ಷಕ್ಕೆ ಹನ್ನೆರಡು ಬಾರಿಯಂತೆ. ಆರು ವರ್ಷಗಳು ... ಎಪ್ಪತ್ತೆರಡು ಸಲ ರಾಯರು ನಿನ್ನ ಕಾಣಲು ಬಂದಿದ್ದಾರೆ... ನಾನು ಸುಳ್ಳು ಹೇಳಬಹುದು... ಆದ್ರೆ... ಈ ದಾಖಲೆ ಸುಳ್ಳು ಹೇಳುತ್ತ..?' ಸೂರ್ಯನ ಕಂಗಳಲ್ಲಿ ಅಪ್ರಯತ್ನವಾಗಿ ಕಂಬನಿ ಹರಿಯಲು ಶುರುವಾಗಿತ್ತು.

**ಅಧ್ಯಾಯ 21**

'ಮತ್ತೆ..... ನನ್ನನ್ನು ಮನೆಗೆ ಕರೆದೊಯ್ಯಲು ಅಪ್ಪ ಯಾಕೆ ಬರಲಿಲ್ಲ...?' ಸೂರ್ಯ ಗದ್ಗದಿತನಾಗಿ ಕೇಳಿದ. 'ಬಂದಿದ್ದ... ಆದ್ರೆ ನೀನು ಅವ್ರು ಬರುವ ಮೊದಲೇ, ಆ ರೌಡಿ ಗೋಪಿಯೊಡನೆ ಹೊರಟು ಹೋಗಿದ್ದೆ... ನಾನು, ನಿನ್ನಪ್ಪ ನಿನಗಾಗಿ ತುಂಬಾ ಹುಡುಕಾಡಿಸಿದೆವು... ಆದ್ರೆ...ಯಾವಾಗ ನೀನು ಆ ರೌಡಿ ಗೋಪಿ ಸ್ನೇಹದಲ್ಲಿದ್ದೀಯೆಂದು ಅರಿವಾಯಿತೋ, ನಿನ್ನಪ್ಪನಿಗೆ ಸಿಟ್ಟು ಬಂದಿತು... ಅವ್ರೆಲ್ಲಾ ಕಳ್ಳತನದ ರೆಕಾರ್ಡ್ ಹೊಂದಿದವರು.... ನೀನು ಅವರೊಡನೆ ಸೇರಿ ಅದನ್ನೇ ಮಾಡ್ತಿದ್ದೀಯ ಎಂದು ತಿಳಿದು ಅವ್ರಿಗೆ ನೋವಾಯಿತು... ಇಷ್ಟು ವರ್ಷಗಳ ಶಿಕ್ಷೆ ನಿನ್ನ ಮನಸ್ಸನ್ನು ಪರಿವರ್ತಿಸಲು ಸಾಧ್ಯವಾಗಲಿಲ್ಲ ಎನ್ನುವ ನೋವು ಅವ್ರಿಗೆ... ಹಾಗಾಗಿ ನಿನ್ನನ್ನು ನಿನ್ನ ಪಾಡಿಗೆ ಬಿಟ್ಟು ಬಿಟ್ಟರು...' ಸೂರ್ಯ ಚಿತ್ತ ಪಾವನವಾಗಿತ್ತು.

'ಅಪೂರ್ವ...ನನ್ಗೆ ಈಗ್ಲೇ ಮನೆಗೆ ಹೋಗ್ಬೇಕು...' ಸೂರ್ಯ ದಡಬಡಿಸಿ ಎದ್ದ. ಅಪೂರ್ವ ಪುಟ್ಟಸ್ವಾಮಿಯ್ಯನವರಿಗೆ ಧನ್ಯವಾದಗಳನ್ನು ಅರ್ಪಿಸಿ ಮುಂಬಾಗಿಲನ್ನು ದಾಟುತ್ತಿದ್ದ ಸೂರ್ಯನೆಡೆಗೆ ಧಾವಿಸಿದಳು.

ಆಟೋ ಹಿಡಿದು ಅಲ್ಲಿಂದ ಹೊರಟು ಮನೆಯ ಮುಂದೆ ಇಳಿಯುವ ತನಕ ಸೂರ್ಯ ಒಂದು ಮಾತು ಆಡಿರಲಿಲ್ಲ. ಅವನಿಗೆ ರಾಯರ ಬಗ್ಗೆ ಇದ್ದ ತಪ್ಪು ಕಲ್ಪನೆ ಹೋಗಲಾಡಿಸುವ ತನ್ನ ಪ್ರಯತ್ನ, ಎಷ್ಟರ ಮಟ್ಟಿಗೆ ಫಲಕೊಟ್ಟಿದೆ ಎಂದು ಅರಿವಾಗದೇ, ಸೂರ್ಯನ ಮನದಲ್ಲೇನಿದೆ ಎಂದು ತಿಳಿಯದೆ ಅವಳು ತಳಮಳಿಸಿದ್ದಳು. ಮನೆಯೊಳಗೆ ದಾಪುಗಾಲಿಕ್ಕಿ ಬಂದ ಸೂರ್ಯ, ಎದುರಿಗೆ ಬಂದ ತಾಯಿಗೆ,'ಅಮ್ಮ ಅಪ್ಪ ಎಲ್ಲಿ..?' ಎಂದು ದನಿ ಏರಿಸಿ ಕೇಳಿದಾಗ, ವಿಜಯಮ್ಮನಿಗೂ, ಸೂರ್ಯನ ಹಿಂದೆಯೇ ಬಂದ ಅಪೂರ್ವಳಿಗೆ ಈಗೇನು ರಾದ್ಧಾಂತ ಕಾದಿದೆಯೋ ಎಂಬ ಕಳವಳ ಮೂಡಿತ್ತು. ಆಗ ತಾನೆ ಮನೆ ಸೇರಿ ಕೈಕಾಲು ತೊಳೆದು ಬಂದ ರಾಯರನ್ನು ಕಾಣುತ್ತಲೇ, ಸೂರ್ಯ ಹೋಗಿ ಅವರ ಕಾಲಿನ ಬಳಿ ಕುಸಿದು ಕಣ್ಣೀರಿಟ್ಟ,'ಅಪ್ಪ... ನನ್ನನ್ನು ಕ್ಷಮಿಸು... ನಾನು ನಿನ್ನನ್ನು ಅರ್ಥ ಮಾಡಿಕೊಳ್ಳಲಿಲ್ಲ... ನನಗೆ ಎಲ್ಲಾ ಸತ್ಯ ತಿಳಿಯಿತು...' ಎಂದಾಗ ರಾಯರು ಏನೊಂದೂ ಅರ್ಥವಾಗದವರಂತೆ ಪತ್ನಿಯ, ಅಪೂರ್ವಳ ಮುಖದತ್ತ ಅಯೋಮಯವಾಗಿ ದಿಟ್ಟಿಸಿದರು.

'ನನಗೆ ಜೈಲರ್ ಪುಟ್ಟಸ್ವಾಮಯ್ಯನವರು ಎಲ್ಲಾ ಹೇಳಿದ್ರು... ನೀನು ಪ್ರತಿ ತಿಂಗ್ಳು ನನ್ನ ನೋಡಲು ಜೈಲಿಗೆ ಬರ್ತಾ ಇದ್ಯಂತೆ...ಬಂದ್ರೂ ಮಾತನಾಡಿಸದೇ ಹಾಗೇ ಹೋಗ್ತಾ ಇದ್ಯಂತೆ...'

ಸೂರ್ಯನ ಮಾತು ಕೇಳಿ ಈಗ ದಿಗ್ಭ್ರಾಂತರಾಗುವ ಸರದಿ ವಿಜಯಮ್ಮನದ್ದು. 'ಹೌದೇನ್ರೀ.. ಮತ್ತೆ ನನಗೂ ಯಾಕೆ ಇದನ್ನು ತಿಳಿಸಲಿಲ್ಲ...?'. ರಾಯರು ಇನ್ನು ಸತ್ಯ ಮುಚ್ಚಿಟ್ಟು ಯಾವ ಪ್ರಯೋಜನವಿಲ್ಲವೆನಿಸಿ ಭಾರವಾದ ನಿಟ್ಟುಸಿರು ಹೊರ ದಬ್ಬಿದರು.

'ನೀನು ಸೂರ್ಯನನ್ನು ಆ ಸ್ಥಿತೀಲಿ ನೋಡಿ, ಇನ್ನೂ ದುಃಖಿಸುವುದು ಬೇಡ ಎಂಬ ಕಾರಣಕ್ಕೆ ನಿನ್ಗೆ ಕರೆದೊಯ್ಯಲಿಲ್ಲ. ನಾನು ಹೋದ್ರೆ, ನಿನಗೆ ತಿಳಿಸಿದ್ರೆ ನೀನೂ ಬರ್ತೀಯ ಅಂತ ಒತ್ತಾಯಿಸ್ತೀಯಾ... ಸೂರ್ಯನನ್ನ ಮರಳಿ ಮನೆಗೆ ಕರೆ ತರ್ತೀನಿ ಅಂದ್ಕೊಂಡಿದ್ದೆ ಆದ್ರೆ.... ಅವ್ನು ಜೈಲಿನಿಂದ ಹೊರ ಹೋದ ಮೇಲೆ ಆ ರೌಡಿ ಗೋಪಿ ಸಹವಾಸ ಮಾಡಿದ್ದನ್ನು ಕಂಡು ಅವನನ್ನು ಅವನ ಪಾಡಿಗೆ ಬಿಟ್ಟೆ... ಅದಿಕ್ಕೇ ದೇವಸ್ಥಾನದಲ್ಲಿ ಮೊದಲ ಬಾರಿ ಕಂಡಾಗಲೂ ಮನೆಗೆ ಸೇರಿಸಲಿಲ್ಲ... ಇಲ್ಲಿ ಬಂದಾಗ ಪೋಲಿಸ್ ಕಳ್ಳತನದ ಆರೋಪದ ಮೇಲೆ ಕರೆದೊಯ್ದಾಗಲೂ ಬಿಡಿಸುವ ಪ್ರಯತ್ನ ಮಾಡಲಿಲ್ಲ... ಸೂರ್ಯ ಎಂದೂ ಬದಲಾಗಲ್ಲ ಅಂತ ಭಾವಿಸಿದ್ದೆ..' ರಾಯರು ತಮ್ಮ ಮನದ ಹಾಳೆಗಳಲ್ಲಿ ದಾಖಲಾಗಿದ್ದ ತಮ್ಮ ಭಾವನೆಗಳನ್ನು ತೆರೆದಿಟ್ಟರು.

ವಿಜಯಮ್ಮನ ಕಣ್ಣಲ್ಲೂ ನೀರಾಡಿತ್ತು.

**(ಸಶೇಷ)**